ದಿನಾಂಕ 19.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ದಿನಾಂಕ 12.12.1986 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-1, ದಿನಾಂಕ 01.04.1980 ರಿಂದ 31.03.2003 ರ ಅವಧಿಯ ಋಣಭಾರ ಪ್ರಮಾಣಪತ್ರವನ್ನು ನಿಪಿ-2, ಎಂ.ಆರ್ ನಂ.51/1986-87 ರ ದೃಢೀಕೃತ ನಕಲನ್ನು ನಿಪಿ-3, ಸರ್ವೇ ನಂ.112/1 ರ 4 ಕೈಬರಹ ಪಹಣಿಗಳ ಯಥಾ ನಕಲುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-7, ಸರ್ವೇ ನಂ.112/1 ರ 25 ಗಣಕೀಕೃತ ಪಹಣಿಗಳನ್ನು ಕ್ರಮವಾಗಿ ನಿಪಿ-8 ರಿಂದ ನಿಪಿ-32, ನನ್ನ ಗಂಡನ ಮರಣ ಪ್ರಮಾಣಪತ್ರವನ್ನು ನಿಪಿ-33, ನಮ್ಮ ಕುಟುಂಬದ ವಂಶವೃಕ್ಷ ದೃಢೀಕರಣ ಪತ್ರವನ್ನು ನಿಪಿ-34, ದಿನಾಂಕ 31.01.2023 ರ ಸ್ವೀಕೃತಿಯನ್ನು ನಿಪಿ-35, ಕೃಷಿ ಪಾಸ್ ಪುಸ್ತಕವನ್ನು ನಿಪಿ-36, ದಿನಾಂಕ 24.01.2023 ರ ಕ್ರಯದ ಕರಾರು ಪತ್ರದ ಆನ್‌ಲೈನ್ ಪ್ರತಿಯನ್ನು ನಿಪಿ-37, ದಿನಾಂಕ 12.12.1986 ರ ಕ್ರಯಪತ್ರವನ್ನು ನಿಪಿ-38, ಎಂ.ಆರ್ ಹೆಚ್.29/2023-24 ರ ಆನ್‌ಲೈನ್ ಪ್ರತಿಯನ್ನು ನಿಪಿ-39, ಸರ್ವೇ ನಂ.112/1 ರ 1986-87 ನೇ ಸಾಲಿನ ಕೈಬರಹ ಪಹಣಿಯನ್ನು ನಿಪಿ-40, ಸರ್ವೇ ನಂ.112/1 ರ 2 ಪುಟಗಳ ಪಹಣಿಯ ಆನ್‌ಲೈನ್ ಪ್ರತಿಯನ್ನು ನಿಪಿ-41 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.